# ಗಜಾನನ ನರಸಿಂಹ ಭಟ್ಟ, ತುಳಗೇರಿಮಠ

ಯಕ್ಷಗಾನ ಭಾಗವತರು, ತರಬೇತುದಾರರು, ಪ್ರಸಂಗಕರ್ತರು, ಕವಿ, ಸಾಮಾಜಿಕ ಕಾರ್ಯಕರ್ತ, ಅರ್ಚಕ, ಎಲೆಕ್ಟ್ರಾನಿಕ್-ಇಲೆಕ್ಟ್ರಿಕಲ್ ಹಾಗೂ ಟೇಲರಿಂಗ್, ಕೌಶಲದಲ್ಲಿ ಪರಿಣತಿ. ಮುಖ್ಯ ವೃತ್ತಿ: ಕೃಷಿ

ವಿಳಾಸ; ಗಜಾನನ ನರಸಿಂಹ ಭಟ್ಟ, ತುಳಗೇರಿಮಠ
ಅಂಚೆ: ವಾನಳ್ಳಿ –581336
ತಾಲೂಕು: ಶಿರಸಿ
ಜಿಲ್ಲೆ ಉತ್ತರಕನ್ನಡ
ಮೊಬೈಲ್: 9481048634

ತಾಯಿ: ಗಂಗಾ ಭಟ್ಟ. ತಂದೆ : ನರಸಿಂಹ ಭಟ್ಟ.
ವಯಸ್ಸು: 55 ವರ್ಷ (ಜನ್ಮ ದಿನಾಂಕ: 18–05–1970)



**ಯಕ್ಷಗಾನ ಭಾಗವತಿಕೆ:** ಬಡಗು ತಿಟ್ಟಿನ ಪರಂಪರೆಯ ಮಟ್ಟುಗಳ ಸತತ ಅಧ್ಯಯನ ಮತ್ತು ಹವ್ಯಾಸಿ ಯಕ್ಷಗಾನ ತಂಡಗಳ ಶಿಕ್ಷಣ ಮತ್ತು ಪ್ರದರ್ಶನಗಳಲ್ಲಿ ನಿರಂತರ ಮಾರ್ಗದರ್ಶನ
**ಕಲಿಕೆ:** ದಿ. ಗಜಾನನ ಭಟ್ ಹೊಸತೋಟ ಹಾಗೂ ಯಕ್ಷರ್ಷಿ ಹೊಸ್ತೋಟ ಮಂಜುನಾಥ ಭಾಗವತರು.
ವಿಶೇಷ ತರಬೇತಿ: ಶ್ರೀಮಯ ಕಲಾಕೇಂದ್ರ ಗುಣವಂತೆಯಲ್ಲಿ ಭಾ.ಸಂ. ಸಂಯೋಜನೆಯಲ್ಲಿ ಮೂರು ವರ್ಷಗಳ ಅಭ್ಯಾಸ
**ಭಾಗವತರಾಗಿ;**
**ಪರಂಪರೆಗೆ ನಿಷ್ಠವಾದ ಭಾಗವತಿಕೆ;** ಗುರುಗಳಿಂದ ಕಲಿತ ವಿದ್ಯೆಯನ್ನು ಬಳಸುವಾಗ, ಬೆಳೆಸಿಕೊಳ್ಳುವಾಗ ಪರಂಪರೆಗೆ ಅಪಚಾರವಾಗದಂತೆ ಕಾಯ್ದುಕೊಳ್ಳುವುದಕ್ಕೆ ಸಾಕಷ್ಟು ಸಂಯಮವೂ ಬೇಕು. ವರ್ತಮಾನದ ಪ್ರಭಾವಗಳನ್ನು ಅರಗಿಸಿಕೊಂಡು ಪ್ರಸ್ತುತಪಡಿಸುವಾಗ ಪರಿಶ್ರಮವೂ ಬೇಕು. ರಂಗಭೂಮಿಯ ನಿತ್ಯಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತ ಬಂದವರು ಗಜಾನನ ಭಟ್ಟ, ತುಳಗೇರಿಮಠ. ಅಭ್ಯಾಸದ ದಿನಗಳಲ್ಲಿಯೇ ಜಿಲ್ಲಾ ಮಟ್ಟದ ಭಾಗವತಿಕೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಹೆಗ್ಗಳಿಕೆ ಇವರದು.

**ಗ್ರಾಮೀಣ ಪ್ರದೇಶದ ಯಕ್ಷಗಾನ ಕಲಿಕೆಗೆ ಆದ್ಯತೆ.** ಪ್ರಯೋಜನ ದೃಷ್ಟಿಯನ್ನು ಮೀರಿ ಕಲೆಯಲ್ಲಿರುವ ಸಾತ್ವಿಕ ಪ್ರೀತಿಯಿಂದ ಮಾತ್ರ ಸಾಧ್ಯವಾಗುವ ಕಾರ್ಯ, ಗ್ರಾಮೀಣ ಪ್ರದೇಶದ ಯಕ್ಷಗಾನ ಕಲಿಕೆ.

- ಸ್ವರ್ಣವಲ್ಲಿಯ ಯಕ್ಷಶಾಲ್ಮಲಾ ಸಂಸ್ಥೆಯಲ್ಲಿ 15 ವರ್ಷಗಳಿಂದ ಯಕ್ಷಗಾನ ಚಟುವಟಿಕೆಯಲ್ಲಿ ಭಾಗಿ

- "ಯಕ್ಷಸಿರಿ, ಮೆಣಸಿ" ಮಕ್ಕಳ ಮೇಳ ಸ್ಥಾಪನೆ. ಪ್ರತಿವರ್ಷ ಯಕ್ಷಗಾನ ಕಲಿಕಾ ಶಿಬಿರ ನಡೆಸುತ್ತ ಬಂದಿರುವುದು
- ಯಕ್ಷಕಿರಣ ಕೋಳಿಗಾರು, ಅರೆಕಟ್ಟಾ ಮಕ್ಕಳ ಮೇಳ, ದಿವಾನ್ ಯಕ್ಷಸಮೂಹ ಹಾರ್ಸಿಕಟ್ಟಾ, ಇವಲ್ಲದೆ ಬಾಳೆಕೊಪ್ಪ, ಮಾವಿನಕಟ್ಟಾ, ದೊಡ್ಮನೆ, ಕಾನಸೂರು, ಹೆಗ್ಗಾರು, ಭೈರುಂಬೆ ಹೀಗೆ ಶಿರಸಿ, ಸಿದ್ದಾಪುರ ಹಾಗೂ ಯಲ್ಲಾಪುರ ತಾಲೂಕುಗಳ ಗ್ರಾಮೀಣ ಪ್ರದೇಶದಲ್ಲಿ ಯಕ್ಷಗಾನ ತರಬೇತಿ ಹಾಗೂ ಪ್ರದರ್ಶನಗಲ್ಲಲಿ ನಿರಂತರ ಭಾಗಿ.

**ತಾಳಮದ್ದಲೆಗೆ ತರಬೇತಿ:**

- ಮಕ್ಕಳಿಗೆ ಬಣ್ಣದ ಆಟ ಆಡಿಸಿದಂತೆ ಯುವಕರಲ್ಲಿ ಸಾಹಿತ್ಯದ, ವಾಗ್ವಿಲಾಸದ ಆಸಕ್ತಿಯನ್ನು ಬೆಳೆಸಲು ಪ್ರಯತ್ನಿಸಿದರು
- ಊರಿನ ಸುತ್ತಮುತ್ತ ಇರುವ ಯುವಕರನ್ನು ಸಂಘಟಿಸಿ "ಯಕ್ಷಚೇತನ ಬಳಗ" ತಾಳಮದ್ದಲೆ ಕೂಟ ಸಂಘಟಿಸಿದ್ದು.  ಅಗ್ರಹಾರ ಕೃಷ್ಣ ಭಟ್ಟರ ಹಿರಿತನದಲ್ಲಿ ತಾಳನದ್ದಲೆಯ ಅಭ್ಯಾಸ
- ಹೊಸ್ತೋಟ ಮಂಜುನಾಥ ಭಾಗವತರ ಮಾರ್ಗದರ್ಶನದಲ್ಲಿ ಕಡೇಮನೆ ಕಟ್ಟೆ ಶಾಲೆಯಲ್ಲಿ ಆಭ್ಯಾಸ ವರ್ಗ
- ಹೊಸ್ತೋಟ ಮಂಜುನಾಥ ಭಾಗವತರ ಮಾರ್ಗದರ್ಶನದಲ್ಲಿ ಸೀಮೆಯಲ್ಲಿ ರಾಮಾಯಣ, ಭಾಗವತ ತಾಳಮದ್ದಲೆ ಸರಣಿ ನಡೆಸಿದ್ದು
- ಸ್ವರ್ಣವಲ್ಲಿಯಲ್ಲಿ ನಡೆಯುವ ತಾಳಮದ್ದಲೆ ಸ್ಪರ್ಧೆಯಲ್ಲಿ ಸತತ ಮೂರು ವರ್ಷಬಹುಮಾನ ಪಡೆದುಕೊಂಡ ಸ್ಥಳೀಯ ಶಿಕ್ಷಣ ಸಂಸ್ಥೆಯ ಮಕ್ಕಳಿಗೆ ಮಾರ್ಗದರ್ಶನ
- ನಿಶಾನೆ ಗುಡ್ಡದಲ್ಲಿ ಒಂದೂವರೆ ದಶಕದಿಂದ ತಾಳಮದ್ದಲೆ, ಯಕ್ಷಗಾನ ಏರ್ಪಡಿಸುತ್ತ ಬಂದಿದ್ದು
- ಜಿಲ್ಲಾ ಮಟ್ಟದ ತಾಳಮದ್ದಲೆ ಸ್ಪರ್ಧೆಯಲ್ಲಿ ಇವರ ನೇತೃತ್ವದ ಕೂಟ ಪ್ರಥಮ ಸ್ಥಾನ ಪಡೆಯಿತು
- ಹೊಸ್ತೋಟ ಭಾಗವತರಿಂದ "ಶ್ರೀ ಸತ್ಯನಾರಾಯಣ ಮಹಾತ್ಮೆ" ಪ್ರಸಂಗ ಬರೆಸಿದ್ದು, ಆ ಕೃತಿಯನ್ನು ಶ್ರೀ ಕೆರೆಮನೆ ಶಂಭು ಹೆಗಡೆಯವರಿಂದ ಲೋಕಾರ್ಪಣೆಗೊಳಿಸಿದ್ದು

**ಕಲೆಯ ವಿಸ್ತಾರ ಹಾಗೂ ಹೊಸತನದ ಸ್ಪರ್ಶ:**

- ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಕತ್ವದಲ್ಲಿ ಶಿರಸಿ ತಾಲೂಕು ಕಕ್ಕಳ್ಳಿಯಲ್ಲಿ ಸಿದ್ದಿ ಜನಾಂಗದ ಯುವಕರಿಗೆ ಯಕ್ಷಗಾನ ನೃತ್ಯ ತರಬೇತಿ ಹಾಗೂ ಪ್ರದರ್ಶನ
- ಮುಂಡಗೋಡ ತಾಲೂಕು ಮಳಗಿಯ ನವೋದಯ ಶಾಲೆಯ ಮಕ್ಕಳಿಗೆ ಯಕ್ಷಗಾನ ತರಬೇತಿ ಹಾಗೂ ದೇಶದ ಅನ್ಯಾನ್ಯ ಪ್ರದಾಶಗಳಲ್ಲಿ ನಡೆದ ಪ್ರದರ್ಶನಗಳಲ್ಲಿ ಭಾಗವತರಾಗಿ ಮಾರ್ಗದರ್ಶನ
- ದಿವಾಕರ ಹೆಗಡೆ ಕೆರೆಹೊಂಡ ಅವರ ಏಕವ್ಯಕ್ತಿ ತಾಳಮದ್ದಲೆಯ ಮೈಸೂರು ಹಾಗೂ ಶಿರಸಿಯ ಪ್ರದರ್ಶನಗಳಲ್ಲಿ ಭಾಗವತರಾಗಿ ಯಶಸ್ವಿಯಾಗಿ ನಿರ್ವಹಿಸಿದ್ದು
- ಸ್ವರ್ಣವಲ್ಲಿಯ ಶಬರ ಸಂಸ್ಥೆಯ ಆಯೋಜಿಸಿದ್ದ ನಬಾರ್ಡ್ ಸಂಸ್ಥೆ ಪ್ರಾಯೋಜಿತ "ಬ್ಯಾಕಿಂಗ್ ಸಾಕ್ಷರತಾ ಜಾಗೃತಿ" ಯಕ್ಷಗಾನ ಸರಣಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ರಾಜ್ಯಾದ್ಯಂತ ನಡೆದ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದು

**ಪ್ರಸಂಗ ರಚನೆ** : ಭಾಗವತರಾಗಿ ಮಾರ್ಗದರ್ಶನ ಮಾಡುತ್ತಿರುವಾಗ ಬರುವ ಬೇಡಿಕೆಗಳಿಗೆ ಉತ್ತರವಾಗಿ, ಶ್ರದ್ಧಾವಂತರ ಅಪೇಕ್ಷೆಗಳಿಗನಿಗುಣವಾಗಿ, ಸಾಂದರ್ಭಿಕ ಅಗತ್ಯಗಳಿಗೆ ಸ್ಪಂದಿಸಿ ಅನೇಕ ಪ್ರಸಂಗಗಳನ್ನೂ ಬರೆದಿದ್ದಾರೆ.

- **ಪೌರಾಣಿಕ ಪ್ರಸಂಗಗಳು;**
  ಸತ್ಯಶೀಲ ವಿಜಯ, ಘಟೋತ್ಕಚ ಜನ್ಮ, ಮಂಗಳಗೌರಿ ಮಹಾತ್ಮೆ, ವಸುಂಧರಾ ಪರಿಣಯ ಧನುರ್ವಿದ್ಯಾ ಪರೀಕ್ಷೆ
- **ಐತಿಹಾಸಿಕ ಪ್ರಸಂಗ;** ಝಾನ್ಸಿರಾಣಿ ಲಕ್ಷ್ಮೀಬಾಯಿ
- **ಸಾಂದರ್ಭಿಕ ಪ್ರಸಂಗಗಳು;** ಬೇಟಿ ಬಚಾವೋ, ಮಹಿಳಾ ಸಬಲೀಕರಣ, ಜೀವ ಸಮರ ಹಾಗೂ ಬ್ರಾಹ್ಮಣೋ ಮಮ ದೇವತಾ

**ಪ್ರಸ್ತುತ ಹೊಣೆಗಾರಿಕೆ;** ಯಕ್ಷಗೆಜ್ಜೆ ಶಿರಸಿ, ಯಕ್ಷಸಿರಿ, ಯಕ್ಷಕಿರಣ, ಕಾಶ್ಯಪ ಪ್ರತಿಷ್ಠಾನ ಗಡಿಗೆಹೊಳೆ, ಕಲಾ ಸಂಗಮ ಶಿರಸಿ ಮುಂತಾದ ಹವ್ಯಾಸಿ ಯಕ್ಷಗಾನ ತಂಡಗಳಲ್ಲಿ ನಿರ್ದೇಶಕರಾಗಿ, ಭಾಗವತರಾಗಿ ಮಾರ್ಗದರ್ಶನ. ಗ್ರಾಮೀಣ ಪ್ರದೇಶದ ಯಕ್ಷಗಾನ ಬಯಲಾಟ ಹಾಗು ತಾಳಮದ್ದಲೆಗಳ ಭಾಗವತರಾಗಿ ಕಲಾಸೇವೆಗೆ ಒದಗುವುದು.

**ಲೇಖನ ವ್ಯವಸಾಯ:** ಯಕ್ಷಗಾನೀಯ ಸ್ತುತಿ ಪದ್ಯಗಳ ಸಂಗಡ ಮಕ್ಕಳ ಕಥೆ, ಕವನಗಳು, ಭಕ್ತಿಗೀತೆಗಳು, ಭಾವಗೀತೆಗಳು, ಮುನ್ನುಡಿ, ಬೆನ್ನುಡಿ, ಮುಕ್ತಕಗಳು ಹೀಗೆ ಅವಕಾಶದಲ್ಲಿ– ಅನಿವಾರ್ಯದಲ್ಲಿ ಸಾಕಷ್ಟು ಬರೆದಿದ್ದಾರೆ.

**ಸಕ್ರಿಯ ಸಾಮಾಜಿಕ:** ಪರಿಶ್ರಮದ ಕೃಷಿ ಕಾಯಕದ ಸಂಗಡ ಸುತ್ತಲಿನ ಸಮಾಜದ ಅಗತ್ಯಗಳಿಗೆ ಸಂವೇದನಶೀಲರಾಗಿ ಸ್ಪಂದಿಸಿದ್ದಾರೆ.

- ಕೊಡ್ನಗದ್ದೆ ಗ್ರಾಮಪಂಚಾಯತ ಸದಸ್ಯರಾಗಿ ಸೇವೆ
- ಸ್ಥಳೀಯ ಶಾಲಾ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷತೆ ವಹಿಸಿ ಶಿಕ್ಷಣದ ಹಾಗೂ ಮಕ್ಕಳ ಕಾಳಜಿ
- ತಮ್ಮ ಗ್ರಾಮದಲ್ಲಿ ಹೊಸ ಅಂಗನವಾಡಿಯ ಸ್ಥಾಪನೆ
- ಆರ್ಥಿಕ ಸಾಕ್ಷರತೆಗೆ, ಸಾಮಾಜಿಕ ಸಾಮರಸ್ಯಕ್ಕೆ, ಮಹಿಳೆಯರ ಸಬಲೀಕರಣಕ್ಕೆ ವೇದಿಕೆಯಾದ ಸ್ವಸಹಾಯ ಸಂಘಗಳ ಸ್ಥಾಪನೆಯಲ್ಲಿ ಮುಖ್ಯಪಾತ್ರ
- ಗ್ರಾಮದಲ್ಲಿ ಸರ್ವಋತು ರಸ್ತೆಗಳ ನಿರ್ಮಾಣದ ಮುಂದಾಳತ್ವ
- ತಮಗಿರುವ ಇಲೆಕ್ಟ್ರಿಕಲ್ ಜ್ಞಾನದಿಂದ ಸ್ಥಳೀಯ ಕಿರು ಜಲವಿದ್ಯುತ್ ಸ್ಥಾವರದ ಸ್ಥಾಪನೆ ಮತ್ತು ನಿರ್ವಹಣೆಯಲ್ಲಿ ಮುಖ್ಯ ಪಾತ್ರ ಮತ್ತು ತಮ್ಮ ಗ್ರಾಮಕ್ಕೇ ವಿಶೇಷವಾದ ವ್ಯವಸ್ಥೆಯಿಂದ ಊರಿನ ಅನೇಕ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು
- ಗ್ರಾಮೀಣರಿಗೆ ಮಾಧ್ಯಮ ಸಂಪರ್ಕ: ಸ್ಥಳೀಯ ಪ್ರತಿಭೆಗಳಿಗೆ ಆಕಾಶವಾಣಿಯಲ್ಲಿ ಅವಕಶ ಕಲ್ಪಿಸುವಲ್ಲಿ ಪ್ರಯತ್ನಿಸಿದ್ದು. ಸ್ಥಳೀಯ ಒಕ್ಕಲಿಗರ ಜಾನಪದ ಕಾರವಾರ ಆಕಾಶವಾಣಿಯ ಧ್ವನಿಮುದ್ರಣವಾಗುವಲ್ಲಿ ಸಂಯೋಜಕರಾದದ್ದು.

**ಧಾರ್ಮಿಕ ಹೊಣೆಗಾರಿಕೆ:** ಗಜಾನನ ಭಟ್ಟರು ಪರಂಪರೆಯಿಂದ ವೈದಿಕರು. ಪ್ರಾಚೀನ ಅಗ್ರಹಾರವಾಗಿದ್ದ ತುಳಗೇರಿಯ ಶ್ರೀ ಮಹಾದೇವಿ ದೇವಾಲಯದ ಅರ್ಚಕತ್ವ ಇವರ ಮನೆತನದ ಹೊಣೆಗಾರಿಕೆ. ದೇವೀ ಅರ್ಚನೆಯೊಂದಿಗೆ ಧಾರ್ಮಿಕ ಪರಿಷತ್ತಿನ ಹೊಣೆಗಾರಿಕೆಯೂ ಇದೆ.

**ಅವಿಭಕ್ತ ಕುಟುಂಬದ ಅನನ್ಯ ನಿದರ್ಶನ:** ತುಳಗೇರಿ ಮಠದ ಶ್ರೀ ನರಸಿಂಹ ಭಟ್ಟರದ್ದು ತುಂಬು ಸಂಸಾರ. ಐವರು ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ಗಂಡು ಮಕ್ಕಳಲ್ಲಿ ಗಜಾನನ ಭಟ್ಟರು ಕಿರಿಯವರು. ಅಣ್ಣ ಯಕ್ಷಗಾನದ ಮದ್ದಲೆ ವಾದಕರು. ಪರಂಪರೆಯಿಂದ ಅನಂತನ ವ್ರತದ ನಿಮಿತ್ತ ಪ್ರತಿವರ್ಷ ಯಕ್ಷಗಾನ, ತಾಳಮದ್ದಲೆ ನಡೆಸಿಕೊಂಡು ಬಂದ ಶ್ರದ್ಧಾ ಪರಿವಾರ. ಈಗಲೂ ಒಂಭತ್ತು ಸದಸ್ಯರ ಅವಿಭಕ್ತ ಕುಟುಂಬ ಸಾಮರಸ್ಯದಿಂದ ಬದುಕುತ್ತಿರುವುದು ಹವ್ಯಕ ಸಮಾಜಕ್ಕೆ ಮಾದರಿಯಾಗಿದೆ. ಆಧುನಿಕ ವಿದ್ಯೆ, ಸೌಕರ್ಯಗಳನ್ನು ಪ್ರಾಪ್ತಿಸಿಕೊಂಡರೂ ಪರಂಪರೆಯ ಶ್ರದ್ಧೆಗೆ ಮುಕ್ಕಾಗದಂತೆ ಜೀವನ ವಿಧಾನವನ್ನು ರೂಪಿಸಿಕೊಂಡಿದ್ದಾರೆ.

ಕೆಲವು ಸಾಂದರ್ಭಿಕ ಭಾವಚಿತ್ರಗಳು:



ಪಾತ್ರಧಾರಿಯ ಹೆಜ್ಜೆಗಳನ್ನು ಗಮನಿಸುವ ರಂಗದ ಭಾಗವತರು




ಮಕ್ಕಳ ತಾಳಮದ್ದಲೆಯ ಮಾರ್ಗದರ್ಶಕ


ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ, ಕೆರೆಮನೆ (ರಿ.)

ಅಂಚೆ: ಗುಣವಂತೆ, ತಾಲೂಕು: ಹೊನ್ನಾವರ (ಉ.ಕ)-581 348 ದೂ.: 9480516300/9448189140

E-mail: idagunjimela@gmail.com Website: https://www.yakshaganakeremane.com

(ಸ್ಥಾಪನೆ - 1934)

ಪ್ರಮಾಣ ಪತ್ರ

ಶ್ರೀ ಗಜಾನನ ಭಟ್ಟ, ತುಳಗೇರಿ ಮಠ

ಇವರು ನಮ್ಮ ಮಂಡಳಿ ೨೦೧೦ ರಿಂದ ೨೦೧೨ ರವರೆಗೆ ಮೂರು ವರ್ಷಗಳ ಕಾಲ ನಡೆಸಿದ ಭಾಸಂ (ಯಕ್ಷಗಾನ ಭಾಗವತಿಕೆ ಅಧ್ಯಯನ ಮತ್ತು ಸಂಶೋಧನೆ) ತರಬೇತಿಯ ಒಟ್ಟೂ ೨೭ ಶಿಬಿರಗಳಲ್ಲಿ ಯಶಸ್ವಿಯಾಗಿ ಭಾಗವಹಿಸಿದ್ದಕ್ಕಾಗಿ ಈ ಪ್ರಮಾಣ ಪತ್ರ ನೀಡಲ್ಪಟ್ಟಿದೆ.

ಭಾಸಂ-ಸಂಪನ್ಮೂಲ ಗಣ್ಯರು

...ಹೊಸ್ತೋಟ ಮಂಜುನಾಥ ಭಾಗವತರು * ಶ್ರೀ ನೆಬ್ಬೂರು ನಾರಾಯಣ ಭಾಗವತರು * ಶ್ರೀ ಸದಾನಂದ ಐತಾಳರು, ಗುಂಡ್ಮಿ * ಶ್ರೀ ಕಪ್ಪೆಕೆರೆ ಸುಬ್ರಾಯ...
* ಶ್ರೀ ಕೆರೆಮನೆ ರಾಮ ಹೆಗಡೆ * ಶ್ರೀ ರವಿಕಿರಣ, ಮಣಿಪಾಲ

ಶ್ರೀ ಗುರುರಾಜ ಮಾರ್ಪಳ್ಳಿ
ಭಾಸಂ ಸಂಯೋಜಕರು

ಕೆರೆಮನೆ ಶಿವಾನಂದ ಹೆಗಡೆ
ಭಾಸಂ ನಿರ್ದೇಶಕರು

ಭಾ.ಸಂ. ತರಬೇತಿಯ ಪ್ರಮಾಣ ಪತ್ರ


ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಹಳಿಯಾಳ,
ಹೊಂಗಿರಣ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಸ್ಥೆ(ರಿ) ಹಳಿಯಾಳ.ಉ.ಕ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉತ್ತರಕನ್ನಡ ಜಿಲ್ಲೆ
ಇವರ ಸಹಯೋಗದಲ್ಲಿ

ಈಶ್ವರೀಯ ಸನ್ಮಾನ

ಶ್ರೀ ಗಜಾನನ ಭಟ್, ಭಾಗವತರು ಆದ ತಾವು
ಅನೇಕ ವರ್ಷಗಳಿಂದ ಯಕ್ಷಗಾನ ರಂಗ ಚಟುವಟಿಕೆಯಲ್ಲಿ ತಮ್ಮನ್ನು
ತೊಡಗಿಸಿಕೊಂಡು ಹಲವು ಕಾರ್ಯಕ್ರಮಗಳನ್ನು ನೆರವೇರಿಸಿದ್ದಿರಿ. ಯಕ್ಷಗಾನದ
ಉಳಿವಿಗೆ ಕಾರಣವಾಗಿರುವ ನಿಮಗೆ ತಮ್ಮ ಸೇವೆಯನ್ನು ಗುರುತಿಸಿ
ಈಶ್ವರೀಯ ಸನ್ಮಾನವನ್ನು ಮಾಡಲಾಗಿದೆ.
ತಮ್ಮ ಸೇವೆ ಹೀಗೆ ಮುಂದುವರಿಯಲೆಂದು ಶುಭ ಹಾರೈಸುತ್ತೇವೆ


BK Padma

ಶ್ರೀ ಮತಿ ಸುಜಾತಾ ಬಿರಾದಾರ
ಅಧ್ಯಕ್ಷರು ಹೊಂಗಿರಣ ಸಾಂಸ್ಕೃತಿಕ ಮತ್ತು
ಸಾಮಾಜಿಕ ಸಂಸ್ಥೆ (ರಿ) ಹಳಿಯಾಳ.

ಡಾ: ಬಿ .ಕೆ. ಪದ್ಮಕ್ಕ
ಸಂಚಾಲಕರು ಪ್ರಜಾಪಿತ ಬ್ರಹ್ಮಕುಮಾರಿ
ಈಶ್ವರೀಯ ವಿಶ್ವವಿದ್ಯಾಲಯ ಹಳಿಯಾಳ

ಸ್ಥಳ: ಹಳಿಯಾಳ ದಿನಾಂಕ: 16/09/2019

ಅಲ್ಲಲ್ಲಿ ಸಂದ ಸ್ಥಳೀಯ ಸಂಮಾನಗಳು


ಯಕ್ಷಗೆಜ್ಜೆ (ರಿ) ಶಿರಸಿ
ಮಹಿಳಾ ಮತ್ತು ಮಕ್ಕಳ
ಯಕ್ಷಗಾನ ತಂಡ

ಶ್ರೀ ಗಜಾನನ ಭಟ್ಟ, ತುಳಗೇರಿಮಠ ಇವರಿಗೆ ಅರ್ಪಿಸುವ

ಸನ್ಮಾನ ಪತ್ರ

ಶ್ರೀಯುತರೇ,
ಗರಿಗೆದರಿದ ಭಾಗವತರಾಗುವ ಕನಸನ್ನು ಪರಿಶ್ರಮದಿಂದ ನನಸಾಗಿಸಿಕೊಂಡು ರಂಗದಲ್ಲಿ ಲೀಲಾಜಾಲವಾಗಿ ಸೂತ್ರಧಾರರಾಗಿ, ಸಮರ್ಥವಾಗಿ ಯಕ್ಷಗಾನ ಆಖ್ಯಾನಗಳನ್ನು ಆಡಿಸುತ್ತಿದ್ದೀರಿ. ನಮ್ಮ 'ಯಕ್ಷಗೆಜ್ಜೆ' ಸಂಸ್ಥೆಯ ಕಾರ್ಯಕ್ರಮಗಳಿಗೆ ಧ್ವನಿಯಾಗಿ ಅವಿಭಾಜ್ಯ ಅಂಗವಾಗಿದ್ದೀರಿ. ನಗು ಮೊಗದಿಂದ ಎಲ್ಲರ ಪ್ರೀತಿ ಗಳಿಸಿ, ತಾವು ಹವ್ಯಾಸಿ ಮೇಳಗಳಿಗೆ ತಾಳಮದ್ದಲೆ ಕೂಟಗಳಿಗೆ ಭರವಸೆಯ ಭಾಗವತರಾಗಿದ್ದೀರಿ. ಅಗ್ರಹಾರ ಕೃಷ್ಣ ಭಟ್ಟ, ಯಕ್ಷಋಷಿ ಹೊಸ್ತೋಟ ಮಂಜುನಾಥ ಭಟ್ಟ, ಗಜಾನನ ಭಟ್ಟ, ಕೆರೆಮನೆಯ ಕಲಾಕೇಂದ್ರದಲ್ಲಿ ಅಭ್ಯಾಸಗೈದು ಭಾಗವತಿಕೆ ಜೊತೆ ತರಬೇತುದಾರರಾಗಿಯೂ, ಕಲಾಸೇವೆಗೈಯುತ್ತಿದ್ದೀರಿ. ಯಕ್ಷಗಾನ ಸಾಹಿತ್ಯ ರಚನೆ, ಲೇಖನ ಬರಹ, ಮಕ್ಕಳ ಸಾಹಿತ್ಯ ರಚನೆಯಲ್ಲೂ, ಸಿದ್ಧಹಸ್ತರಾದ ತಾವು ಗ್ರಾ.ಪಂ. ಸದಸ್ಯರಾಗಿ ಶಾಲಾ ಸಮಿತಿ ಅಧ್ಯಕ್ಷಗಾದಿಗೇರಿ ಸಮಾಜ ಸೇವೆ ಗೈದಿದ್ದಲ್ಲದೇ ಹಲವಾರು ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ಜನೋಪಕಾರಿ ಕಾರ್ಯಗಳನ್ನು ನಡೆಸಿದ್ದೀರಿ. ಧಾರ್ಮಿಕ ಮನೋಭಾವದ, ಸ್ನೇಹಮಯಿ ಸಾತ್ವಿಕ ವ್ಯಕ್ತಿಯಾಗಿ ಮನೆಯವರ ಪ್ರೀತಿಯ ಬೆಂಬಲಗಳೊಂದಿಗೆ ಸಮಾಜದ ಸಮಸ್ತರಲ್ಲಿ ಆತ್ಮೀಯತೆಯನ್ನು ಹೊಂದಿ ಮಾತಮಾನ್ಯಗಳಲ್ಲೂ 'ಗಜಾನನ ಗನಾಽಜನ' ಎಂಬ ಹೆಮ್ಮೆಯ ನುಡಿಗೆ ಪಾತ್ರರಾಗಿರುವ ತಮಗೆ ಹಾಗೂ ತಮ್ಮ ಕುಟುಂಬಕ್ಕೆ ಶ್ರೀದೇವರು ಆಯುರಾರೋಗ್ಯ, ಐಶ್ವರ್ಯ–ನೆಮ್ಮದಿಗಳನ್ನು ಕರುಣಿಸಲಿ ಇನ್ನೂ ಹೆಚ್ಚಿನ ಸಾಧನೆ ಗೌರವಗಳು ತಮ್ಮದಾಗಲೆಂದು ಆಶಿಸುತ್ತಾ ಈ ಸಂಮಾನ ಪತ್ರವನ್ನು ಅರ್ಪಿಸುತ್ತಿದ್ದೇವೆ.

ಸ್ಥಳ : ಲಯನ್ಸ್ ಭವನ, ಶಿರಸಿ
ದಿನಾಂಕ : 28-12-2019

ಶ್ರೀಮತಿ ನಿರ್ಮಲಾ ಮಂಜುನಾಥ ಹೆಗಡೆ
ಅಧ್ಯಕ್ಷರು
ಯಕ್ಷಗೆಜ್ಜೆ (ರಿ.) ಶಿರಸಿ ಮಹಿಳಾ ಮತ್ತು ಮಕ್ಕಳ ಯಕ್ಷಗಾನ ತಂಡ, ಶಿರಸಿ